

ಮೀಸಲಾತಿಯನ್ನು ಬಳಸದೆ ಇರುವ ಹೆಚ್ಚುಗಾರಿಕೆ ಹುಚ್ಚುಗಾರಿಕೆಯದ್ದೇ ಬೇರೆ ಕಥೆ ಬಿಡಿ!

ಇದ್ದಕ್ಕಿದ್ದ ಹಾಗೆ ನಾನೊಂದು ದಿನ ನನ್ನ ಹೆಸರಿನ ಬಲಪಕ್ಕದಲ್ಲಿದ್ದ 'ಪಿ' ಎಂಬ ಇನಿಷಿಯಲ್ಲನ್ನು ಅಳಿಸಿ ದೊಡ್ಡಮ್ಮನ ಮೊದಲ ಹೆಸರಿಂದ ಜೈ, ದೊಡ್ಡಪ್ಪನ ಮೊದಲ ಹೆಸರಿಂದ ಮ, ಅಮ್ಮನ ಮೊದಲ ಹೆಸರಿಂದ ನ್ ಅಕ್ಷರಗಳನ್ನು ಜೋಡಿಸಿ ಜೈಮನ್ ಎಂದು ನನ್ನ ಹೆಸರಿನ ಕೊನೆಗೆ ಜೋಡಿಸಿಕೊಂಡೆ. ನಾನು ಯಾಕೆ ಹಾಗೆ ನನ್ನ ಇನಿಷಿಯಲ್ಲನ್ನು ತೆಗೆದೆ ಎಂದು ಈಗ ನೆನಪಿಸಿಕೊಂಡರೆ ಕಾರಣಗಳು ಕೊಂಚ ಮಬ್ಬು ಮಬ್ಬಾದರೂ ನನ್ನ ಬಾಲ್ಯದಲ್ಲಿ ನನ್ನ ಸುಪ್ತ ಮನಸ್ಸಿನ ಮೇಲೆ ನಾವು ಪಿಂಜಾರರು ಅನ್ನುವ ಕಾರಣಕ್ಕೆ ಆದ ಕೆಲವು ಗಾಯಗಳು ಅಚ್ಚೊತ್ತಿ ಕೂತಿದ್ದರಿಂದಲೋ ಏನೋ ನಾನದನ್ನು ತೆಗೆದಿರಬಹುದು ಎನಿಸುತ್ತದೆ. ಇನಿಷಿಯಲ್ಲನ್ನ ತೆಗೆದುಬಿಟ್ಟರೆ ಜಾತಿವಿನಾಶ ಮಾಡಿದಂತಾಗಿ ಬಿಡುತ್ತದೆಯೇ ಎಂಬ ಪ್ರಶ್ನೆಗೆ ನನ್ನ ಬಳಿ ಉತ್ತರ ಇಲ್ಲ ಈಗ!

ಮೊದಮೊದಲೆಲ್ಲ ನಾನು ಚಿಕ್ಕವನಿದ್ದಾಗ ನಿನಗೆ ಉರ್ದು ಬರುವುದಿಲ್ಲವೋ- ಎಂದೋ, ಹಿಂದಿ ಮತ್ತು ಉರ್ದು ಬರದಿದ್ದರೆ ನೀನೆಂತ ಸಾಬಿಯೊ- ಎಂದು ಕೆಲವರೆಂದರೆ ನಾವು ಎಲ್ಲರಂತಲ್ಲ ಎಂದು ಅನಿಸುತ್ತಿತ್ತು. 'ಯಾಕಲೋ ಸಾಬ ವೈಕಂತಿ.. ದೇವ್ರ್ ಕೊಟ್ಟ ತುಣ್ಣೆ ಕೊಯ್ಯಿಕಂತಿ' ಎಂದು ಎದುರು ಮನೆಯ ಭಾಗ್ಯಕ್ಕನೋ, ಕೊನೆ ಮನೆಯ ಸುಶೀಲಕ್ಕನೋ ನನ್ನ ಅಮ್ಮನ ಬೈಯುವ ತರಾತುರಿಯಲ್ಲಿ ನನ್ನ ಹಿಡಿದು ಅಣಸಾಡುತ್ತಿದ್ದರು. ಎಂಟೋ ಒಂಬತ್ತೋ ವರ್ಷದವನಿದ್ದ ನನಗೆ ಮೊದಮೊದಲು ಅದನ್ನು ಕೇಳಿದಾಗ ವಿಚಿತ್ರ ತಳಮಳವಾಗುತ್ತಿತ್ತು. ಕಣ್ಣಲ್ಲಿ ನೀರೂ ನಿಲ್ಲುತ್ತಿತ್ತೇ ಎಂಬುದು ಈಗ ನೆನಪಾಗುತ್ತಿಲ್ಲ. ಒಂದೆರಡು ಬಾರಿ ಅಮ್ಮನ ಬಳಿ ಬಂದು 'ಅಮಾ, ಎದ್ರುಮನಿ ಅವಕ್ಕ ಹಿಂಗಂತು ನೋಡಬೇ! ನಾವ್ಯಾಕ್ ಹಂಗ್ ಮಾಡ್ತೀವಿ? ಅವರ್ಯಾಕ್ ಹಂಗ್ ಮಾಡಲ್ಲಬೇ'